

ಬೇಲಿ ಮೇಲೆ ಕಾಣ ಸಿಗುವ ತಿಳಿ ಹಳದಿ ಹೂ.



ಓಲಿಯಾಂಡರ್ ಪುಷ್ಪ ಹೋಲುವ ಹೆಸರೇ ಇಲ್ಲದ ಹಳದಿ ಹೂ.



ಚಿತ್ರಕಾರ ಕಡೆದಿಟ್ಟಂತೆ ಕಾಣುವ, ಹೆಸರೇ ಇಲ್ಲದ ಪಂಚ ವರ್ಣದ ಹೂ.



ಮುಂಜಾನೆ ಹಿಮ ಮಣಿಗಳಿಂದ ಅಲಂಕೃತಗೊಂಡು ಶೋಭಿಸುವ ಲಂಟಾನದ ಹೂ.

# ಬೇಲಿ ಮೇಲಿನ ಬೆಡಗಿಯರು!

■ ಚಿತ್ರ ಬರಹ:
**ಗಣಂಗೂರು ನಂಜೇಗೌಡ**



'ಆವರಿಕೆ' ಹೆಸರಿನಿಂದ ಕರೆಯಲ್ಪಡುವ ಢಾಳ ಹಳದಿ ಬಣ್ಣದ ಹೂ ಗೊಂಚಲು.



ಆರ್ದ್ರತೆ ಹೆಚ್ಚು ಇರುವ ಬೇಲಿಗಳಲ್ಲಿ ಅರಳುವ, ಲಿಲಿ ಹೂಗಳನ್ನು ಹೋಲುವ ವಯಲೆಟ್ ಬಣ್ಣದ ಪುಷ್ಪಗಳು.

ರೈತ ತನ್ನ ಹೊಲದ ಸುತ್ತ ಹಾಕಿದ ಬೇಲಿ ಮೇಲೆ ಮಳೆಗಾಲ ಶುರುವಾಗುವ ಮುನ್ನ ಲತೆಗಳು ಹಬ್ಬಿ ಹೂವರಳಿಸಿ ನಗೆ ಸೂಸುತ್ತವೆ. ನೋಡುವ ಮನಸ್ಸುಗಳಿಗೆ ಮುದ ನೀಡುತ್ತವೆ. ಹೆಸರೇ ಇಲ್ಲದ, ವಿವಿಧ ವರ್ಣ, ಆಕಾರ ಮತ್ತು ವಿನ್ಯಾಸದ ಸಾಕಷ್ಟು ಹೂಗಳು ಬೆಡಗು, ಬಿನ್ನಾಣ ತೋರುತ್ತವೆ. ಕೆಲವು ಹೂಗಳು ಕಂಪನ್ನೂ ಬೀರುತ್ತವೆ. ಗಾಳಿ ಬೀಸಿದಂತೆಲ್ಲ ಬಳುಕಿ ಲಾಸ್ಯವಾಡುತ್ತವೆ.

ಓಲಿಯಾಂಡರ್ ಪುಷ್ಪವನ್ನು ಹೋಲುವ, ಓಲಗದಂತೆ ಕಾಣುವ ಹಳದಿ ಬಣ್ಣದ ಮತ್ತೊಂದು ಹೂ ಸುವಾಸನೆ ಭರಿತವಾದದ್ದು. ನೀರಿನ ಪಸೆ ಇರುವ ಬೇಲಿಯಲ್ಲಿ ಈ ಹೂ ಕಂಡು ಬರುತ್ತದೆ. ಹೆಚ್ಚೂ ಕಡಿಮೆ ಲಿಲಿ ಹೂವನ್ನು ಹೋಲುವ, ವಯಲೆಟ್ ಬಣ್ಣದ ಪುಟ್ಟ ಪುಟ್ಟ ಪುಷ್ಪಗಳು ಆರ್ದ್ರತೆ ಹೆಚ್ಚು ಇರುವ ಸ್ಥಳದಲ್ಲಿ ಸಾಮಾನ್ಯವಾಗಿ ಕಂಡು ಬರುತ್ತವೆ. ಮೈತುಂಬಾ ಮುಳ್ಳುಗಳಿರುವ ಲಂಟಾನದ ಗಿಡದ ಕೊರಳಲ್ಲಿ ಅರಳುವ ಕೆಂಪು ವರ್ಣದ ಹೂಗಳು ಕಣ್ಣಿಗೆ ಹಬ್ಬವನ್ನು ಉಂಟು ಮಾಡುತ್ತವೆ. ಮುಂಜಾನೆ ಇಬ್ಬನಿಯ ಬಿಂದುಗಳು ಈ ಹೂವಿನ ಮೇಲೆ ಬಿದ್ದರಂತೂ ಅದರ ಸೌಂದರ್ಯ ಇಮ್ಮಡಿಸುತ್ತದೆ.

ಸ್ಥಳೀಯವಾಗಿ ಆವರಿಕೆ ಎಂದು ಕರೆಯಲ್ಪಡುವ, ಬೇಲಿಯಲ್ಲಿ ಮಾತ್ರವಲ್ಲದೆ ಬಯಲಿನಲ್ಲೂ ಬೆಳೆಯುವ ಕಾಡು ಸಸ್ಯವೊಂದು ಢಾಳ ಹಳದಿ ಬಣ್ಣದ ಆಕರ್ಷಕ ಹೂವನ್ನು ಗೊಂಚಲು ಗೊಂಚಲಾಗಿ ಅರಳಿಸುತ್ತದೆ. ಈಗ ಹೇಳ ಹೊರಟಿರುವುದು ಹೆಸರಿಲ್ಲದ ಮತ್ತೊಂದು ಹೂವಿಯ ವಿಷಯ. ಬಳ್ಳಿಯಲ್ಲಿ ಅರಳುವ ಇದು ಸೌಂದರ್ಯದಲ್ಲಿ ಗುಲಾಬಿಯನ್ನೂ ಮೀರಿಸುತ್ತದೆ. ಬಿಳಿ ಬಣ್ಣದ ದಳಗಳು, ಅದಕ್ಕೆ ಅಪ್ಪಿಕೊಂಡಿರುವ ಕೆನೆ ಬಣ್ಣದ ಸೂಕ್ಷ್ಮ ಕೇಸರಗಳ ಸಾಲು, ಅದರ ಮೇಲೆ ಮೃದುವಾದ 5 ತಿಳಿ ಹಳದಿ ಕಡ್ಡಿಗಳು, ಇವುಗಳ ನಡುವೆ ಗಡಿಯಾರದ ಕಡ್ಡಿಗಳಂತಿರುವ 3 ತಿಳಿ ಹಸಿರು ಕಡ್ಡಿಗಳು ಮತ್ತು ಹೂವಿನ ಕೇಂದ್ರ ಬಿಂದುವಿನಲ್ಲಿ ನಸುಗೆಂಪು ಬಣ್ಣ. ಅಬ್ಬಾ! ಒಂದೇ ಹೂವಿನಲ್ಲಿ ಎಷ್ಟೊಂದು ಬಣ್ಣ, ಎಷ್ಟೆಲ್ಲಾ ಅಲಂಕಾರ!